ಅಡ್ಡ ಹಾಕಿ, ಮರೆಗೆ ಎಳೆದುಕೊಂಡು ಹೋಗಿ ಅವರ ರಕ್ತ ಹೀರತೊಡಗಿದೆ. ಅದು ನನಗೆ ನಿಜವಾದ ತೃಪ್ತಿಯನ್ನು ಕೊಡತೊಡಗಿತು. ಆದ್ರೆ ನಂಗೆ ನನ್ನನ್ನು ಯಾರೂ ಗುರುತು ಹಿಡಿಯುವುದು ಇಷ್ಟ ಇರ್ಲಿಲ್ಲ. ಅದಕ್ಕೆ ತೋಳದ ಮುಖವಾಡವೊಂದನ್ನು ಎಲ್ಲಿಂದಲೋ ಕದ್ದು ತಂದೆ....ನನ್ನ ರಕ್ತ ಕುಡಿಯುವ ಚಟ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಹೋಯ್ತು.. ಹೀಗಿರೋವಾಗ ಒಂದು ಸಾರಿ ಋತುವಿನ ಕಾಲೇಜಿನ ಹುಡುಗರ ಹಾಸ್ಟೆಲ್ಲಿನ ಹತ್ರ ಹೋಗಿದ್ದೆ. ಅಲ್ಲಿನ ವಿದ್ಯಾರ್ಥಿಗಳನ್ನು ನೋಡಿ ನಾನು ಚಿತ್ರಹಿಂಸೆ ಅನುಭವಿಸಿದ್ದ ಬಳ್ಳಾರಿಯ ಮೆಡಿಕಲ್ ಕಾಲೇಜಿನ ಹಾಸ್ಟೆಲ್ ನೆನಪಾಗಿತ್ತು. ಎಲ್ಲರ ಮೇಲೂ ಆಕ್ರೋಶ ಉಕ್ಕಿ ಬಂದಿತ್ತು. ಅಲ್ಲಿರುವ ಯಾವನನ್ನೂ ಬಿಡಬಾರದು. ಎಲ್ಲರ ರಕ್ತ ಹೀರಿ ಸಾಯಿಸ್ಲೇಬೇಕೂಂತ ಡಿಸೈಡ್ ಮಾಡ್ದೆ...' ಭರತ ಬಹಳ ದಿನಗಳ ನಂತರ ಮಾತನಾಡುತ್ತಿದ್ದುದರಿಂದ ತಡೆತಡೆದು ಮಾತನಾಡಿದ. ಎಲ್ಲರೂ ದಿಗ್ಭ್ರಾಂತರಾಗಿ ಅವನ ಮಾತುಗಳನ್ನು ಕೇಳುತ್ತಿದ್ದರೆ ಅನೇಕ ಟಿವಿ ಚಾನೆಲ್‌ಗಳು ಅವನ ಮಾತುಗಳನ್ನು ನೇರ ಪ್ರಸಾರ ಮಾಡತೊಡಗಿದ್ದವು.

ಭರತ ಮತ್ತೆ ಮುಂದುವರೆದ.

'ಪಪ್ಪ, ದಯವಿಟ್ಟು ನನ್ನ ಕ್ಷಮಿಸ್ಬಿಡಿ, ನಿಮ್ಮ ಹೆಸರಿಗೆ ಮಸಿ ಬಳಿಯುವಂತಹ ಅಪರಾಧಗಳನ್ನು ನಾನು ಮಾಡಿದ್ದೀನಿ, ಈ ಎರಡು ವರ್ಷಗಳಲ್ಲಿ ಅದೆಷ್ಟು ವಿದ್ಯಾರ್ಥಿಗಳು ನನ್ನ ರಕ್ತದಾಹಕ್ಕೆ ಬಲಿಯಾಗಿದ್ದಾರೋ ನಂಗೊತ್ತಿಲ್ಲ, ಆದ್ರೆ ನಂಗೆ ನನ್ನ ಕಂಟ್ರೋಲ್ ಮಾಡಿಕೊಳ್ಳೋಕೆ ಆಗಲ್ಲ ಪಪ್ಪ, ಈಗ್ಲೂ ಕಾಲೇಜು ವಿದ್ಯಾರ್ಥಿಗಳನ್ನು ನೋಡಿದ್ರೆ ಅವರ ಮೇಲೆ ಬಿದ್ದು ಅವರ ರಕ್ತ ಹೀರಿ ಸಾಯಿಸಿಬಿಡೋಣ ಅನ್ನುತ್ತೆ..' ಭರತ ಚಿಕ್ಕ ಮಗುವಿನಂತೆ ಗಳಗಳನೆ ಅತ್ತುಬಿಟ್ಟ.

ಒಂದು ನಿಮಿಷ ಯಾರೂ ಮಾತಾಡಲಿಲ್ಲ. ಎಲ್ಲರಿಗೂ ಆಘಾತವಾಗಿತ್ತು. ಕೋಟೆ ಬಂಗಲೆಯ ರಾಜಕುಮಾರ ಭರತ ರಕ್ತದಾಹಿಯಾಗಿ ರೂಪಾಂತರವಾಗಿದ್ದ.

ಪುರುಷೋತ್ತಮರು ಕಂಗೆಟ್ಟವರಂತೆ ಕಂಡರು. ಸೋಫಾದ ಮೇಲೆ ಕುಸಿದು ಕುಳಿತರು. ಕಲಾವತಿಯ ಪರಿಸ್ಥಿತಿಯೂ ಇದಕ್ಕಿಂತ ಹೊರತಾಗಿರಲಿಲ್ಲ. ನಂಬಲಾಗದವಳಂತೆ ಮಗನನ್ನೇ ನೋಡುತ್ತಾ ಕುಳಿತುಬಿಟ್ಟಳು.

ಋತು ಒಂದೇ ಸಮನೆ ಕಣ್ಣೀರು ಸುರಿಸುತ್ತಿದ್ದಳು. ಒಂದು ಕಡೆ ನಂದಿಯಲ್ಲಿ ಹರಿಕೃಷ್ಣರು ತಾಯಿಯ ಬಗೆಗಿನ ರಹಸ್ಯವನ್ನು ಹೇಳಿ ತಲ್ಲಣಗೊಳಿಸಿದ್ದರೆ ಇನ್ನೊಂದು ಕಡೆ ಪ್ರೀತಿಯ ತಮ್ಮ ಭರತ ಮೈ ನಡುಗಿಸುವಂತಹ ಕೊಲೆಪಾತಕಿಯಾಗಿ ಬದಲಾಗಿದ್ದ.

'ಪುರುಷೋತ್ತಮರೇ ನೀವು ನನ್ನ ತಂದೆಯ ಸಮಾನರು, ಹಿರಿಯರು, ನಿಮಗೆ, ನಿಮ್ಮ ಶ್ರೀಮತಿಯವರಿಗೆ ಆದ ಆಘಾತವನ್ನು ನಾನು ಊಹಿಸಬಲ್ಲೆ, ಆದ್ರೆ ಪರಿಸ್ಥಿತಿ ಈಗ ಕೈ ಮೀರಿ ಹೋಗಿದೆ, ನಿಮ್ಮ ಮಗ ಹೊರಗಿದ್ದರೆ ಇನ್ನೂ ಅದೆಷ್ಟು ವಿದ್ಯಾರ್ಥಿಗಳ ರಕ್ತ ಹೀರಿ ಅವರನ್ನು ಕೊಲ್ತಾನೋ ಹೇಳೋಕಾಗಲ್ಲ. ಕಳೆದ ಎರಡು ವರ್ಷಗಳಿಂದ ಹೆಚ್ಚಾಗಿ ಇದೇ ಏರಿಯಾದಲ್ಲಿ ಯುವಜನರ, ಅದರಲ್ಲೂ ಹದಿಹರೆಯದ ವಿದ್ಯಾರ್ಥಿಗಳು ಕಾಡುಮೃಗಗಳು ದಾಳಿ ಮಾಡುವ ರೀತಿಯಲ್ಲಿ ಕೊಲೆಯಾಗುತ್ತಿದ್ದುದು ನಮ್ಮ ಡಿಪಾರ್ಟ್‌ಮೆಂಟ್‌ನ ಗಮನಕ್ಕೂ ಬಂದಿತ್ತು. ಅಪರಾಧಿ ಮಾತ್ರ ಕೈಗೆ ಸಿಕ್ಕಿರಲೇ ಇಲ್ಲ. ಆದ್ರೆ ಎರಡು ವಾರದ ಹಿಂದೆ ಜ್ಞಾನದೇಗುಲ ಕಾಲೇಜಿನಲ್ಲಿ ಸರಣಿ ಕೊಲೆಗಳು ಆರಂಭವಾದ್ಮೇಲೆ ಹೊರಗೆ ಯಾವುದೇ ಕೊಲೆಗಳು ನಡೆದ ವರದಿಯಾಗ್ಲಿಲ್ಲ.

## ಕಣ್ಣು


ಸತ್ತ ಮೇಲೂ
ನೋಡುತ್ತಿತ್ತು,
ನೇತ್ರದಾನದ ಕಣ್ಣು!

* * *

## ಬೇಡಿಕೆ

ಬಂಗಾರದ
ಬೆಲೆ ಏರಿದಾಗ,
ಅವಳ ಬೇಡಿಕೆಯೂ ಏರಿತು!

★ ಬಾಲು ಪಟಗಾರ



ಈಶ್ವರ

ಆಗ್ಲೇ ನಾವು ಇವೆಲ್ಲವನ್ನೂ ಯಾರೋ ಒಬ್ಬ ವ್ಯಕ್ತಿಯೇ ಮಾಡುತ್ತಿದ್ದಾನೆಂದು ಊಹೆ ಮಾಡಿದ್ವಿ. ನಿಮ್ಮ ಮಗ ಕಾಲೇಜಿನಲ್ಲಿ ಮೊದಲ ಕೊಲೆ ಮಾಡ್ದಾಗ ಯಾವ ಸುಳಿವೂ ಅವ್ನ ಬಗ್ಗೆ ಸಿಗ್ಲಿಲ್ಲ. ಆದ್ರೆ ಹತ್ತು ದಿನಗಳ ನಂತರ ಜೋಡಿಕೊಲೆಗಳನ್ನು ಮಾಡಿದಾಗ ಮಾತ್ರ ವಿದ್ಯಾರ್ಥಿಯೊಬ್ಬ ಅವನ ಮುಖವಾಡವನ್ನು ಕಿತ್ತೆಸೆದು ತಲೆಗೂದಲನ್ನು ಎಳೆದಾಡಿದ್ದಾನೆ. ಅವನು ಸತ್ತರೂ ಜೊಂಪೆ ಕೂದಲು ಅವನ ಮುಷ್ಟಿಯಲ್ಲೇ ಉಳಿದಿದೆ. ಜೊತೆಗೆ ಕೊಲೆಗಾರ ಧರಿಸಿದ್ದ ಚಿಕ್ಕ ರುದ್ರಾಕ್ಷಿ ಸರ ಕಿತ್ತು ಹೋಗಿ ಅದು ಹಾಸ್ಟೆಲ್ಲಿನ ರೂಮಿನ ಸುತ್ತಾ ಚೆಲ್ಲಾಡಿದೆ. ಇವೆಲ್ಲಾ ನಿಮ್ಮ ಮಗನನ್ನು ಕೊಲೆಗಾರ ಎಂದು ಪ್ರೂವ್ ಮಾಡೋಕೆ ಮುಖ್ಯ ಸಾಕ್ಷಿಗಳಾದ್ವು. ನಮ್ಮ ಈ ಎಲ್ಲಾ ಇನ್ವೆಸ್ಟಿಗೇಷನ್ನುಗಳಿಗೆ ನೆರವಾಗಿ ನಿಂತಿದ್ದು ಈ ಬಂಗಲೆಯ ಭಾವೀ ಅಳಿಯ ನನ್ನ ಕ್ಲೋಸ್ ಫ್ರೆಂಡ್, ಫೇಮಸ್ ಪ್ರೈವೇಟ್ ಡಿಟೆಕ್ಟಿವ್ ಹೇಮಂತ್ಕುಮಾರ್...' ಎಂದ ಅಜಯ್ ಕುಲಕರ್ಣಿ. ಇದುವರೆಗೆ ಮೌನವಾಗಿದ್ದ ಹೇಮಂತನೀಗ ಪುರುಷೋತ್ತಮರ ಬಳಿ ಬಂದ.

'ಅಂಕಲ್, ದಯವಿಟ್ಟು ನನ್ನ ಕ್ಷಮಿಸ್ಬಿಡಿ, ನಿಜ ಹೇಳಬೇಕಂದ್ರೆ ನಂಗೂ ಭರತನ ಬಗ್ಗೆ ಯಾವುದೇ ಅನುಮಾನ ಇರ್ಲಿಲ್ಲ, ಕಾಲೇಜಿನ ವಿದ್ಯಾರ್ಥಿ ಪ್ರಶಾಂತ ಮೊದಲು ಕೊಲೆಯಾದ ದುರ್ದೈವಿ. ಅವನ ಕೊಲೆಯಾದ ನಾಲ್ಕನೇ ದಿನಕ್ಕೆ ನಾನು ನಿಮ್ಮ ಬಂಗ್ಲೆಗೆ ಮೊದಲ ಬಾರಿ ಬಂದಿದ್ನಲ್ಲ, ಅದು ಭಾವೀ ಅಳಿಯನಾಗಿ ನಿಮ್ಮಲ್ಲಿಗೆ ನನ್ನ ಮೊದಲ ಭೇಟಿ ಆಗಿತ್ತಷ್ಟೇ. ಆ ದಿನ ರಾತ್ರಿ ಟೆರೇಸಿನ ಲತಾ ಮಂಟಪದಲ್ಲಿ ನಾನು, ಋತು ಏಕಾಂತದಲ್ಲಿರೋವಾಗ ಯಾರೋ ಸೀನಿದ ಹಾಗಾಯ್ತು. ಯಾವುದೋ ವ್ಯಕ್ತಿ ಹೊರಗಡೆಯ ಮೆಟ್ಟಿಲಿಳಿದು ಹೋಗಿದ್ದನ್ನು ನೋಡಿದ್ವಿ. ಆದ್ರೆ ಆಗ ಯಾರೂಂತ ಗೊತ್ತಾಗ್ಲಿಲ್ಲ. ನಮ್ಮ ಮಾತುಕತೆಯನ್ನು ಕೇಳಲು ಯಾರೋ ಇಂಟರೆಸ್ಟ್ ತೋರಿಸ್ತಿದ್ದಾರೆ ಅಂದ್ರೆ ಅದು ಈ ಬಂಗಲೆಗೆ ಸಂಬಂಧಪಟ್ಟವರೇ ಆಗಿರ್ಬೇಕೂಂತ ಊಹಿಸಿದೆ. ಕೆಳಗಿಳಿದು ಬಂದಾಗ ಭರತ ನೆಗಡಿಯ ಬಾಧೆಯಿಂದ ಸೀನುತ್ತಿದ್ದುದು ನನ್ನ ಗಮನಕ್ಕೆ ಬಂತು. ಆಗಲೇ ಅವನ ಮೇಲೆ ಕಣ್ಣಿಟ್ಟೆ. ಅವನು ಸಣ್ಣ ರುದ್ರಾಕ್ಷಿ ಸರವನ್ನು ಧರಿಸಿರುವುದನ್ನೂ ನೋಡಿದ್ದೆ. ಎರಡನೇ ಬಾರಿ ಜೋಡಿ ಕೊಲೆಯಾದಾಗ ವಿದ್ಯಾರ್ಥಿ ಪ್ರವೀಣ ಕೊಲೆಗಾರನ ಜೊಂಪೆ ತಲೆಗೂದಲನ್ನು ಕಿತ್ತು ರುದ್ರಾಕ್ಷಿ ಸರವನ್ನು ಚೆಲ್ಲಾಡಿದ್ದ. ಅದು ನನ್ನ ಅನುಮಾನವನ್ನು ಹೆಚ್ಚು ಮಾಡಿತು. ಆದ್ರೂ ಪೂರ್ತಿಯಾಗಿ ನನ್ನ ಅನುಮಾನ ಬಗೆಹರಿದಿರಲಿಲ್ಲ. ಅವತ್ತು ಜೋಡಿ ಕೊಲೆಯಾದ ದಿನ, ರಾತ್ರಿ ನಿಮ್ಮ ಬಂಗ್ಲೆಗೆ ನಾನು ಬಂದಿದ್ದೇ ಭರತನಿಗಾಗಿ. ಅವನ ತಲೆಗೂದಲನ್ನು ನಾನು ಸಂಗ್ರಹಿಸಬೇಕಿತ್ತು. ಅವನು ಆ ದಿನ ಉಲ್ಲನ್ ಕ್ಯಾಪ್ ಹಾಕಿಕೊಂಡಿದ್ದು ನಂಗೆ ವರವಾಯ್ತು. ಕಲಾವತಿ ಆಂಟಿ ಬಾದಾಮಿ ಹಾಲು ಕೊಡುವಾಗ ಬೇಕೆಂದೇ ನಾನೇ ಕೈಯ್ಯಲುಗಿಸಿ ಅದನ್ನು ಭರತನ ಕ್ಯಾಪಿನ ಮೇಲೆ ಬೀಳುವಂತೆ ಮಾಡಿದೆ. ಆಂಟಿ ಕ್ಯಾಪನ್ನು ಮೂಲೆಯಲ್ಲಿಟ್ಟ ಕೂಡಲೇ ಅದನ್ನು ನಾನು ತೆಗೆದುಕೊಂಡೆ. ಉಲ್ಲನ್ ಕ್ಯಾಪ್ ಆಗಿದ್ರಿಂದ ತಲೆಗೂದಲು ಸಿಕ್ಕಿಹಾಕಿಕೊಂಡಿರ್ಬಹುದು ಅನ್ನೋದು ನನ್ನ ಊಹೆ. ಅದು ಸರಿಯೂ ಆಯ್ತು. ಉಲ್ಲನ್ ಕ್ಯಾಪಿನಲ್ಲಿ ಒಂದಷ್ಟು ತಲೆಗೂದಲುಗಳು ಸಿಕ್ಕಿದ್ವು. ಅವನ್ನೂ, ಕೊಲೆಯಾದ ಜಾಗದಲ್ಲಿ ಪ್ರವೀಣನ ಮುಷ್ಟಿಯಲ್ಲಿದ್ದ ತಲೆಗೂದಲನ್ನೂ ಫೋರೆನ್ಸಿಕ್ ಲ್ಯಾಬಿಗೆ ಪರೀಕ್ಷೆಗೆಂದು ಕಳಿಸಲಾಯ್ತು. ನನ್ನ ಅನುಮಾನ ಸುಳ್ಳಾಗ್ಲಿಲ್ಲ. ಎರಡೂ ಕಡೆ ಸಿಕ್ಕಿದ ತಲೆಗೂದಲು ಒಬ್ಬನದೇ ವ್ಯಕ್ತಿಯದೆಂದು ರಿಪೋರ್ಟ್ ಬಂತು. ನಿಮ್ಮ ಮಗ ಭರತನೇ ನಿಜವಾದ ಸರಣಿ ಕೊಲೆಗಾರ ಅನ್ನುವುದು ಸಾಬೀತಾಯ್ತು...' ನಿಧಾನವಾಗಿ ಹೇಮಂತ ವಿವರಿಸಿದಾಗ ಪುರುಷೋತ್ತಮರಿಗೆ ಮಾತನಾಡಲು ಮತ್ತೇನೂ ಉಳಿದಿರಲಿಲ್ಲ.

'ಪುರುಷೋತ್ತಮರೇ, ನಿಮ್ಮ ಮಗ ಕೊಲೆಗಾರನಾಗಿರಬಹುದು. ಆದ್ರೆ ಅವ್ನು ಮಾನಸಿಕ ವಿಕಲ್ಪಕ್ಕೆ ಒಳಗಾಗಿ ಇಷ್ಟೆಲ್ಲಾ ಕೊಲೆಗಳನ್ನು ಮಾಡಿದ್ದಾನೆ, ಸರಿಯಾದ ಸಮಯದಲ್ಲಿ ಅವನ ಸಮಸ್ಯೆಯೇನು ಎಂದು ತಿಳಿದುಕೊಂಡಿದ್ರೆ ಇಷ್ಟೆಲ್ಲಾ ರಾದ್ಧಾಂತಗಳನ್ನು ತಪ್ಪಿಸ್ಬಹುದಿತ್ತು, ಅವನಿಗೆ ಮಾನಸಿಕ ತಜ್ಞರಿಂದ ಟ್ರೀಟ್‌ಮೆಂಟ್‌ನ ವ್ಯವಸ್ಥೆ ಮಾಡೋಣ, ಅವನು ಜೈಲಿನೊಳಗಿದ್ದುಕೊಂಡೇ ನಾರ್ಮಲ್ ಮನುಷ್ಯನಾಗ್ತಾನೆ ನೋಡ್ತಿರಿ, ಈಗ ಅವನನ್ನು ಕರ್ಕೊಂಡು ಹೋಗೋಕೆ ಪರ್ಮಿಷನ್ ಕೊಡಿ...' ಅಜಯ್ ಕುಲಕರ್ಣಿ ವಿನೀತನಾಗಿ ಮಾತನಾಡಿದ.

'ಅಂಕಲ್, ನಾನು ಕೆಲವು ಸೈಕಿಯಾಟ್ರಿಸ್ಟ್‌ಗಳನ್ನು ಈ ಬಗ್ಗೆ ವಿಚಾರಿಸಿದೆ, ನಿಮ್ಮ ಮಗನಿಗೆ ಬಂದಿರುವ ಅಪರೂಪದ ಮಾನಸಿಕ ರೋಗ 'ವ್ಯಾಂಪಿರಿಸಂ'